# ಪ್ರ ದ ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ

## ಸಿ ಸಿ ನಂಃ 1157/10

ಚಾಸಾ15

ಪ್ರಾಸಾ12

ಸಾಕ್ಷಿಯ ಹೆಸರು : ಬಿ ಆರ್ ನಾರಾಯಣ್

ತಂದೆ /ಗಂಡನ ಹೆಸರು : ರಾಮಚಂದ್ರಯ್ಯ

ವಯಸ್ಸು : 79

ಉದ್ಯೋಗ : ನಿವೃತ ಉಪನ್ಯಾಸಕ

ವಾಸ ಸ್ಥಳ : ಕುಶಾಲನಗರ

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 29.06.2026**
**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ನನಗೆ ಚಾಸಾ 1 ರವರ ಪರಿಚಯ ಇರುತ್ತದೆ . ಚಾಸಾ 2 ರಿಂದ 5 ನನಗೆ ಗೊತ್ತಿಲ್ಲ. ಆರೋಪಿತರರ ಪರಿಚಯ ಇರುತ್ತದೆ . ಸದರಿ ಪ್ರಕರಣದ ವಿಚಾರವಾಗಿ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ . 2001 ರಲ್ಲಿ ಜ್ಞಾನಗಂಗಾ ಎಜುಕೇಸನ್ ಟ್ರಸ್ಟ ಪ್ರಾರಂಭವಾಗಿರುತ್ತದೆ . ನಾನು ಸದರಿ ಟ್ರಸ್ಟಗೆ 101/- ರೂ ವನ್ನು ದೇಣಿಗೆ ರೂಪದಲ್ಲಿ 1 ನೇ ಆರೋಪಿಗೆ ಕೊಟ್ಟಿರುತ್ತೇನೆ . ನಾನು ಕೊಟ್ಟಿದ್ದಕ್ಕೆ ಯಾವುದೇ ರಶೀತಿಯನ್ನು ನಾನು ನೀರಿಕ್ಷಿಸಿರುವುದಿಲ್ಲ ಹಾಗೂ ಅವರುಗಳು ಕೊಟ್ಟಿರುವುದಿಲ್ಲ. ನಾನು ಸದರಿ ಟ್ರಸ್ಟಗೆ ಕರೆಸ್ಪಾಡೆಂಟ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ . ಸ್ವಲ್ಪ ದಿನದ ಮಟ್ಟಿಗೆ ಟ್ರಸ್ಟ ಚೆನ್ನಾಗಿ ನಡೆಯುತ್ತಿತ್ತು ನಂತರ ಟ್ರಸ್ಟಿಗಳ ಮಧ್ಯೆ ಗಲಾಭೆ ಶುರುವಾಗಿರುತ್ತದೆ . ನಂತರ ಟ್ರಸ್ಟಿಗಳ ಅಜಾಗರೂಕತೆಗೆ ನಾನು ಒಳಗಾಗಿ ಬೇಸತ್ತು ನನ್ನ ಹುದ್ದೆಗೆ ರಾಜಿನಾಮೆ ನೀಡಿರುತ್ತೇನೆ . ನಂತರ ನನಗೆ ಯಾವುದೇ ಮೀಟಿಂಗ್ ನ ನೋಟಿಸ್ ಬಂದಿರುವುದಿಲ್ಲ. ನಾನು ಟ್ರಸ್ಟಿಯಲ್ಲ ಎನ್ನುವುದು ಆ ಸಮಯದಲ್ಲಿ ನನಗೆ ತಿಳಿದು ಬಂದಿರುತ್ತದೆ . ಸುಮಾರು 2 -3 ವರುಷಗಳ ನಂತರ ನನ್ನನ್ನು ಟ್ರಸ್ಟಗೆ ಮರು

ಸೇರ್ಪಡೆ ಗೊಳಿಸಿದರು . ಆದಾಗಿ ಸ್ವಲ್ಪ ದಿನಗಳ ನಂತರ ಏನು ನಡೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸೇರ್ಪಡೆ ಗೊಳಿಸಿದ ನಂತರ ಕೆಲವು ತಿಂಗಳುಗಳು ಮಿಂಟಿಂಗ್ ನೋಟಿಸ್ ಬಂದಿದ್ದು ಆ ನಂತರ ನನಗೆ ಯಾವುದೇ ಮಿಂಟಿಂಗ್ ನೋಟಿಸ್ ಬಂದಿರುವುದಿಲ್ಲ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಹೆಚ್ ಇ ಪಿ ವಕೀಲರಿಂದ**

ಹಣ ದುರ್ಬಳಕೆ ಯಾರಿಂದ ಮತ್ತು ಯಾವಾಗ ಆಗಿದೆ ಎಂದು ನನಗೆ ವೈಯಕ್ತಿಕವಾಗಿ ತಿಳಿದಿಲ್ಲ ಎಂದರೆ ಸರಿ .

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ.